**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶಿಲ್ ಜಿ ನಮೋಶಿ, ಇವರು ಪ್ರಸ್ತಾಪಿಸಿರುವ ನಿಯಮ-72 ರ ಸೂಚನೆಗೆ ಉತ್ತರ**

**ಪ್ರಶ್ನೆ:**

ಭಾರತ ಸೇವಾದಳವು ಕರ್ನಾಟಕ ಸರಕಾರದ ಶಾಲಾ ಶಿಕ್ಷಣ ಇಲಾಖೆಯಡಿ ಅನುದಾನಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇದು ಶಿಕ್ಷಕರಿಗೆ ಯುವಜನರಿಗೆ, ವಿದ್ಯಾರ್ಥಿಗಳಿಗೆ ಶಿಸ್ತು, ಸ್ವಯಂ ಸಂಘಟನೆ ಹಾಗೂ ರಾಷ್ಟ್ರಧ್ವಜ, ರಾಷ್ಟ್ರಗೀತೆ ಕುರಿತು ಮತ್ತು ರಾಷ್ಟ್ರಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ನೈತಿಕ ಶಿಕ್ಷಣ, ದೈಹಿಕ ಶಿಕ್ಷಣ, ಪದಕವಾಯಿತು, ಸಲಕರಣೆಗಳ ವ್ಯಾಯಾಮ, ಯೋಗಾಸನದ ಜೊತೆಗೆ ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ತಳಹದಿಯ ಮೇಲೆ ಕಾರ್ಯಕ್ರಮ ಚಟುವಟಿಕೆಗಳು ಮತ್ತು ತರಬೇತಿ ಶಿಬಿರಗಳು ಹಮ್ಮಿಕೊಳ್ಳುವ ಸರ್ಕಾರದ ಏಕೈಕ ಅನುದಾನಿತ ಸಂಸ್ಥೆಯಾಗಿದೆ.

ಆದರೆ ಇಂದು ಇಂತಹ ಉತ್ತಮ ಸಂಸ್ಥೆಯಲ್ಲಿ ರಾಜ್ಯಾದ್ಯಂತ ಜಿಲ್ಲಾ ಸಂಘಟಿಕರಾದ ಸರಕಾರಿ ನೌಕರರಿಗೆ 9 ತಿಂಗಳಿಂದ ಹಾಗೂ ಹಂಗಾಮಿ ಜಿಲ್ಲಾ ಸಂಘಟಕರ ನೌಕರರಿಗೆ 10 ತಿಂಗಳಿಂದ ವೇತನ ಪಾವತಿಯಾಗದೆ ಇರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಇನ್ನೊಂದಡೆ ಕಲುಬುರುಗಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಸಂಘಟಕರ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಗಾಗಿ 2022 ರಲ್ಲಿ ಸರಕಾರದಿಂದ ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಿ 3 ವರ್ಷ ಗತಿಸಿದರು ಕೂಡ ಇಲ್ಲಿಯವರೆಗೆ ಅಭ್ಯರ್ಥಿಗಳಿಗೆ ಸಂದರ್ಶನ ಹಾಗೂ ನೇರ ನೇಮಕಾತಿಯೂ ಕೂಡ ಮಾಡುತ್ತಿಲ್ಲ. ಹಾಗೂ ಸಂಸ್ಥೆಯ ಕಾರ್ಯಕ್ರಮ ಚಟುವಟಿಕೆಗಳಿಗೆ ಪ್ರತಿ ವರ್ಷ ಸರಕಾರ ಅನುದಾನ ನೀಡುತ್ತದೆ. ಆದರೆ ಈ ವರ್ಷ ಅನುದಾನ ನೀಡಿದರು ಕೂಡ ಹಣ ಬಿಡುಗಡೆಯಾಗಿಲ್ಲ. ಇದರಿಂದಾಗಿ ಸಂಸ್ಥೆಯ ಕಾರ್ಯಚಟುವಟಿಕೆಗಳು ಕುಂಠಿತಗೊಂಡು ಸಂಸ್ಥೆಯ ಸದಸ್ಯರ ಉತ್ಸಾಹವು ಕೂಡ ತಗ್ಗುತ್ತಿದೆ. ಹಾಗೂ ಭಾರತ ಸೇವಾದಳ ಹಂಗಾಮಿ ನೌಕರರಿಗೆ ವೇತನಕ್ಕಾಗಿ ಪ್ರತಿ ವರ್ಷ ಸರಕಾರ ಅನುದಾನ ನೀಡುತ್ತಿತ್ತು ಆದರೆ ಈ ಎರಡು ವರ್ಷದಿಂದ ಅನುದಾನ ಕೂಡ ನೀಡುತ್ತಿಲ್ಲ.

ಆದ್ದರಿಂದ ಇದೊಂದು ಸರ್ಕಾರದ ಅನುದಾನಿತ ಸಂಸ್ಥೆಯಾಗಿರುವುದರಿಂದ ಈ ಬಗ್ಗೆ ಗಮನಹರಿಸಿ, ಸಂಸ್ಥೆಯ ನೌಕರರಿಗೆ ನೀಡಬೇಕಾಗಿದ್ದ ಬಾಕಿ ವೇತನವನ್ನು ಬಿಡುಗಡೆ, ವಿವಿಧ ಜಿಲ್ಲೆಗಳಲ್ಲಿ ಖಾಲಿ ಇರುವ ಜಿಲ್ಲಾ ಸಂಘಟಕರ ಹುದ್ದೆಗಳನ್ನು ಭರ್ತಿ ಹಾಗೂ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರ ಗಮನಸೆಳೆಯುತ್ತೇನೆ.

**ಉತ್ತರ:**

- ಭಾರತ್ ಸೇವಾದಳ ಬೆಂಗಳೂರು ಸಂಸ್ಥೆಯ ಖಾಯಂ ನೌಕರರ ಮಾರ್ಚ್ 2025 ರಿಂದ ಜೂನ್ 2025 ರ ಮಾಹೆಯ ವೇತನ ಒಟ್ಟು ರೂ. 33,29,740/-ಗಳನ್ನು ದಿನಾಂಕ: 25.11.2025 ರಂದು ಬಿಡುಗಡೆ ಮಾಡಲಾಗಿರುತ್ತದೆ.
- ಭಾರತ್ ಸೇವಾದಳ ಬೆಂಗಳೂರು ಸಂಸ್ಥೆಯ ಖಾಯಂ ನೌಕರರ ಜುಲೈ 2025 ರಿಂದ ಜನವರಿ 2026 ರ ಮಾಹೆಯ ವೇತನ ಒಟ್ಟು ರೂ. 60,98,156/- ಗಳನ್ನು ದಿನಾಂಕ:10.02.2026 ರಂದು ಬಿಡುಗಡೆ ಮಾಡಲಾಗಿರುತ್ತದೆ.
- ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ಸಂಘಟಕರ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಗಾಗಿ 2022 ರಲ್ಲಿ ಸರಕಾರದಿಂದ ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಸಂಬಂಧ ಸಂದರ್ಶನಕ್ಕಾಗಿ ದಿನಾಂಕ ನಿಗದಿಪಡಿಸಲಾಗಿರುತ್ತದೆ.
- ಭಾರತ್ ಸೇವಾದಳ ಬೆಂಗಳೂರು ಸಂಸ್ಥೆಯ ಕಾರ್ಯಕ್ರಮಗಳಿಗೆ ಸರ್ಕಾರದ ಆದೇಶದ ಸಂಖ್ಯೆ ಇಪಿ 101 ಯೋಯೋಕ 2025 (ಭಾಗ -7 ) ಬೆಂಗಳೂರು ದಿನಾಂಕ:30.01.2026 ರಲ್ಲಿ ಲೆಕ್ಕ ಶೀರ್ಷಿಕೆ: 2204-00-102-0-02-103 ರ ಅಡಿಯಲ್ಲಿ 31.50 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಅದರಂತೆ ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01 ರ ಪತ್ರದ ಸಂಖ್ಯೆ: ಶಾ.ಶಿ/ಭಾ.ಸೇ.ದಳ/ಯೋ.ಕಾ.ಅನ.ಬಿ/01/2025-26/2061713, ದಿನಾಂಕ:27.02.2026 ರಂದು ಮಂಜೂರಾದ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
- ಭಾರತ ಸೇವಾದಳ ಹಂಗಾಮಿ ನೌಕರರಿಗೆ ವೇತನಕ್ಕಾಗಿ ಈ ಸಾಲಿನಲ್ಲಿ ಪ್ರಸ್ತಾವನೆಯು ಸ್ವೀಕೃತಗೊಂಡಿದ್ದು, ಅಗತ್ಯ ಪೂರಕ ದಾಖಲೆಗಳನ್ನು ಸಲ್ಲಿಸಲು ಸಂಸ್ಥೆಯವರಿಗೆ ತಿಳಿಸಲಾಗಿದೆ.

**ಸಂಖ್ಯೆ: ಇಪಿ 27 ಎಂಸಿಡಿ 2026**

**(ಎಸ್. ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**